# ತುಮಕೂರು ವಿಶ್ವವಿದ್ಯಾನಿಲಯ

**ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು,**

**ಬಿ.ಹೆಚ್. ರಸ್ತೆ, ತುಮಕೂರು. ೫೭೨೧೦೩ ದೂ.ಸಂ: ೦೮೧೬-೨೨೬೦೨೨೦**


**ಸಂಖ್ಯೆ: ವಿವಿಕಾತು:೨೦೨೨-೨೩:** **ದಿನಾಂಕ:04.02.2023**

## :ದರಪಟ್ಟಿ ಆಹ್ವಾನ:

**ವಿಷಯ:** ತುಮಕೂರು ವಿಶ್ವವಿದ್ಯಾನಿಲಯದ ವಿಜ್ಞಾನ ಕಾಲೇಜಿನಲ್ಲಿ ದಿನಾಂಕ 28-02-2023 ರಂದು ಹಮ್ಮಿಕೊಳ್ಳಲು ಉದ್ದೇಶಿಸಲಾಗಿರುವ ವಿಜ್ಞಾನ ದಿನಾಚರಣೆಯ ಸಂಬಂಧ ಆಹ್ವಾನಪತ್ರಿಕೆಗಳ ಮುದ್ರಣ, ಪ್ರಮಾಣಪತ್ರ, ಕೈಪಿಡಿ ಮುದ್ರಣ ಹಾಗೂ ಬ್ಯಾನರ್ ಗಳ ಸರಬರಾಜಿಗೆ ದರಪಟ್ಟಿಯನ್ನು ಆಹ್ವಾನಿಸುತ್ತಿರುವ ಕುರಿತು.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜಿನಲ್ಲಿ ದಿನಾಂಕ 28-02-2023 ರಂದು ಹಮ್ಮಿಕೊಳ್ಳಲು ಉದ್ದೇಶಿಸಲಾಗಿರುವ ವಿಜ್ಞಾನ ದಿನಾಚರಣೆಯ ಸಂಬಂಧ ಆಹ್ವಾನಪತ್ರಿಕೆಗಳ ಮುದ್ರಣ, ಪ್ರಮಾಣಪತ್ರ, ಕೈಪಿಡಿ ಮುದ್ರಣ ಹಾಗೂ ಬ್ಯಾನರ್ ಗಳ ಸರಬರಾಜಿಗೆ ಗಳ ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳೊಂದಿಗೆ ದರಪಟ್ಟಿಯನ್ನು ಆಹ್ವಾನಿಸಲಾಗಿದೆ.

| ವಿವರ | ಬೇಡಿಕೆ ಪ್ರಮಾಣ (ಅಂದಾಜು) | ದರ |
|---|---|---|
| **ಆಹ್ವಾನ ಪತ್ರಿಕೆ: Two tone printing, 9.5X4.5** | **100** | **ಪ್ರತಿ ಒಂದರ ದರವನ್ನು ನಮೂದಿಸುವುದು.** |
| **ಪ್ರಮಾಣ ಪತ್ರ: A5 Colour Print** | **600** | |
| **ಕಾರ್ಯಕ್ರಮದ ಕೈಪಿಡಿ (Brochure): Color print, two side** | **100** | |
| **ಬ್ಯಾನರ್: 4x5 ft, 4x8 ft and 3x4 ft** | **01 each** | |

**ಷರತ್ತು ಮತ್ತು ನಿಬಂಧನೆಗಳು:**

1. ದರಪಟ್ಟಿಯನ್ನು ಸಲ್ಲಿಸಲು ಕೊನೆಯ **ದಿನಾಂಕ: 24-02-2023 ಅಪರಾಹ್ನ 04.00** ಗಂಟೆಯವರೆಗೆ ಸಲ್ಲಿಸಬಹುದಾಗಿದ್ದು ದರಪಟ್ಟಿಗಳನ್ನು ಮುದ್ದಾಂ ಅಥವಾ ಅಂಚೆಯ ಮೂಲಕ ಸಲ್ಲಿಸಬಹುದು. ಯಾವುದೇ ಅಂಚೆಯ ವಿಳಂಬಕ್ಕೆ ಅಥವಾ ಅಂಚೆಯು ತಲುಪದಿದ್ದಕ್ಕೆ ಕಾಲೇಜು ಜವಬ್ದಾರರಾಗುವುದಿಲ್ಲ.

2. ದರಪಟ್ಟಿಯನ್ನು **ದಿನಾಂಕ: 25-02-2023 ರಂದು ಪೂರ್ವಾಹ್ನ 11.00 ಗಂಟೆಗೆ** ತೆರೆಯಲಾಗುವುದು.
3. ದರಪಟ್ಟಿಯನ್ನು ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು ಇವರ ಹೆಸರಿಗೆ ಕಡ್ಡಾಯವಾಗಿ ಅಂಚೆಯ ಮೂಲಕ ಅಥವಾ ಖುದ್ದಾಗಿ ತಲುಪಿಸಿತಕ್ಕದ್ದು, ಅಂಚೆಯ ವಿಳಂಬಕ್ಕೆ ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು ಜವಾಬ್ದಾರರಾಗುವುದಿಲ್ಲ.
4. ದರಪಟ್ಟಿಗಳನ್ನು ಯಾವುದೇ ಕಾರಣ ನೀಡದೇ ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು ಕಾಯ್ದಿರಿಸಿಕೊಂಡಿದೆ.
5. ಬೇಡಿಕೆ ಪ್ರಮಾಣವನ್ನು ಹೆಚ್ಚಿಸುವ ಅಥವಾ ಕಡಿತಗೊಳಿಸುವ ಅಧಿಕಾರ ಪ್ರಾಂಶುಪಾಲರದಾಗಿರುತ್ತದೆ.
6. ಸದರಿ ಕಾರ್ಯಕ್ಕೆ ಯಾವುದೇ ಮುಂಗಡವನ್ನು ಪಾವತಿಸುವುದಿಲ್ಲ.
7. ಪೂರೈಕೆ ಆದೇಶವನ್ನು ಪಡೆಯುವವರು ಪ್ರಾಂಶುಪಾಲರ ನಿರ್ದೇಶನದಂತೆ ತೃಪ್ತಿಕರವಾಗಿ ಕಾರ್ಯನಿರ್ವಹಿಸತಕ್ಕದ್ದು.
8. ದರಪಟ್ಟಿಗಳ ಆಯ್ಕೆಯ ವಿಷಯದಲ್ಲಿ ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜಿನ ತೀರ್ಮಾನವೇ ಅಂತಿಮವಾಗಿರುತ್ತದೆ.
9. ತಮ್ಮ ಸಂಸ್ಥೆಯು ಸರಬರಾಜು ಮಾಡಲು ಉದ್ದೇಶಿಸಿರುವ ಉಪಕರಣಗಳ ಸಂರಚನೆಗಳಲ್ಲಿ ವ್ಯತ್ಯಾಸ ಇದ್ದರೆ ಸಂರಚನೆಗಳ ಮಾಹಿತಿಯನ್ನು ದರಪಟ್ಟಿಯೊಂದಿಗೆ ಕಡ್ಡಾಯವಾಗಿ ಸಲ್ಲಿಸುವುದು.
10. ಷರತ್ತು ಬದ್ಧ ದರಪಟ್ಟಿಗಳನ್ನು ಪರಿಗಣಿಸಲಾಗುವುದಿಲ್ಲ.
11. ಪ್ರತಿ ಸಂಸ್ಥೆಯವರು ಏಕೈಕ ದರಪಟ್ಟಿಯನ್ನು ಮಾತ್ರ ಸಲ್ಲಿಸತಕ್ಕದ್ದು.
12. ಸರಬರಾಜು ಆದೇಶದಲ್ಲಿ ನೀಡುವ ಎಲ್ಲಾ ಷರತ್ತುಗಳನ್ನು ಪಾಲಿಸಬೇಕು.
13. ಹೆಚ್ಚಿನ ವಿವರಗಳು ಅಥವಾ ಮಾಹಿತಿಯು ಅಗತ್ಯವಿದ್ದಲ್ಲಿ ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು ಇವರನ್ನು ಸಂಪರ್ಕಿಸಬಹುದು.

ಪ್ರಾಂಶುಪಾಲರು

ಪ್ರಾಂಶುಪಾಲರು
ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು
ತುಮಕೂರು-572 103

**ಪ್ರತಿಗಳು:**

೧. ಸೂಚನಾ ಫಲಕ, ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು.

೨. ಶ್ರೀ. ಹರೀಶ್ ಕುಮಾರ್ ಕೆ, ಸಂಯೋಜಕರು, ವೆಬ್ ಸೈಟ್ ಸಮಿತಿ, ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು.
– ವಿಜ್ಞಾನ ಕಾಲೇಜಿನ ವೆಬ್ ಸೈಟ್ ನಲ್ಲಿ ಪ್ರಕಟಿಸಲು ಸೂಚಿಸಿದೆ.

೩. ಕಚೇರಿ ಪ್ರತಿ.